# ಬೆಳಕಿನ ನೆರಳು

**ಮಹಾತ್ಮ ಮತ್ತು ಹರಿಲಾಲ್**

■ ಮೂಲ: **ದಿನಕರ್ ಜೋಶಿ**

■ ಕನ್ನಡಕ್ಕೆ: **ಡಿ.ಎನ್.ಶ್ರೀನಾಥ್**

ಕಲೆ: ಮನೋಹರ ಆಚಾರ್ಯ

## ಒಂದು

ಜೂನ್ ತಿಂಗಳ ಧಗೆ ಬಿಸಿಲು, ಬೇಟೆಯ ನಂತರ ದಣಿದು ನಿದ್ರಿಸುತ್ತಿರುವ ಸಿಂಹದಂತೆ ಮುಂಬೈ ಗಾಳಿಯಲ್ಲಿ ಕಲೆತಿತ್ತು. ದಿನವಿಡಿಯ ಶ್ರಮದ ನಂತರ ದಣಿದ ಸೂರ್ಯ, ಹಣೆಯಲ್ಲಿ ಮೂಡಿದ ಬೆವರನ್ನು ಒರೆಸಿಕೊಳ್ಳಲು ಪಶ್ಚಿಮ ದಿಕ್ಕಿನಲ್ಲಿ ಸ್ವಲ್ಪ ಹೊತ್ತು ನಿಂತ. ನಂತರ ಆ ಬೆವರು ಮಾಟುಂಗಾ ಪ್ರದೇಶದಲ್ಲಿ ಹನಿಹನಿಯಾಗಿ ಮಳೆಗೆರೆಯಿತು. ಕಳೆದ ಹದಿನೈದು ದಿನಗಳಿಂದ ಮೋಡಗಳು ನಿತ್ಯ ಕವಿಯುತ್ತಿದ್ದವು. ಆದರೆ ವೇದಶಾಲೆಯ ದೈನಿಕ ಭವಿಷ್ಯವಾಣಿಯನ್ನು ತಿರಸ್ಕರಿಸುತ್ತಾ ಮಳೆಗರೆಯದೆ ಮುಂದಕ್ಕೆ ಹೋಗುತ್ತಿದ್ದವು. ಮುಂಬೈನ ನೆಲದ ನೀರಡಿಕೆ ಈ ಚಿಕ್ಕಚಿಕ್ಕ ಹನಿಗಳಿಂದ ನೀಗಲು ಸಾಧ್ಯವೇ? ಮೇ ತಿಂಗಳ ತೀಕ್ಷ್ಣ ಬಿಸಿಲಿನ ನಂತರ ಈಗ ಜೂನ್ ತಿಂಗಳ ಈ ಧಗೆ ತನುಮನವನ್ನು ವ್ಯಾಕುಲಗೊಳಿಸುತ್ತಿತ್ತು.

ಇಂಥ ಧಗೆಯ ಒಂದು ಸಂಜೆ ಕೇಶವಲಾಲ್ ಗಾಂಧಿ ತಮ್ಮ ಕೆಲಸಕಾರ್ಯಗಳಿಂದ ಮುಕ್ತರಾಗಿ ಕಿಂಗ್ ಸರ್ಕಲ್‌ನಲ್ಲಿದ್ದ ತಮ್ಮ ಮನೆಗೆ ಮರಳಿ ಬಂದಾಗ ತುಂಬಾ ದಣಿದಿದ್ದರು. ನಿತ್ಯ ಕೇಶವಲಾಲರು ಮನೆಗೆ ಮರಳಿ ಬರುವಾಗ ಹಗಲು ಕಳೆದು ರಾತ್ರಿಯ ಅಂಧಕಾರ ವ್ಯಾಪಿಸುತ್ತಿತ್ತು. ಆದರೆ ಇಂದು ಯಾಕೋ ಏನೋ ಅವರ ಮನಸ್ಸು ಬೇಸರಗೊಂಡಿತ್ತು. ಮೋಡ ಕವಿದ ವಾತಾವರಣ ಅವರ ಬೇಸರವನ್ನು ಮತ್ತೂ ಹೆಚ್ಚು ಮಾಡುತ್ತಿತ್ತು. ಬಾಯಾರಿದ ಪೃಥ್ವಿಯಿಂದ ಬರುವ ಬಿಸಿ ಉಸಿರಿನಿಂದಾಗಿ ಅವರು ಕಳವಳಗೊಂಡಿದ್ದರು. ಕೇಶವಲಾಲರು ಖಾದಿಯ ಕರ್ಚೀಫಿನಿಂದ ತಮ್ಮ ಮುಖವನ್ನು ಒರೆಸಿಕೊಳ್ಳುತ್ತಾ ಮನೆಯೊಳಗೆ ಬಂದಾಗ ಅವರ ಹೆಂಡತಿಗೆ ಆಶ್ಚರ್ಯದೊಂದಿಗೆ ವಿಚಿತ್ರವೆಂದು ಕಂಡಿತು.

'ನಿಮ್ಮ ಆರೋಗ್ಯ ಸರಿಯಿದೆ ತಾನೇ?' ಹೆಂಡತಿ ಕಳವಳದಿಂದ ಕೇಶವಲಾಲರನ್ನು ನೋಡಿದಳು.

'ಹೂಂ...!' ಕೇಶವಲಾಲರು ನಗುತ್ತಾ ಹೇಳಿದರು, 'ಇವತ್ತು ಯಾಕೋ, ಏನೋ ಕೆಲಸದಲ್ಲಿ ಮನಸ್ಸೇ ಇರಲಿಲ್ಲ. ಇಂದು ದಿನಕ್ಕಿಂತ ಮೊದಲೇ ಮನೆಗೆ ಹೋಗಿ ಏನಾದರು ಓದಬೇಕೆಂದು ಅನ್ನಿಸಿತು.'

ಹೆಂಡತಿ ಹೆಚ್ಚು ವಿಚಾರಣೆ ಮಾಡಲಿಲ್ಲ.

ಕೇಶವಲಾಲರು ಕೈಕಾಲು ತೊಳೆದು, ಬಟ್ಟೆಗಳನ್ನು ಬದಲಿಸಿದರು. ಶುದ್ಧ ಖಾದಿಯ ಬಿಳಿ ಧೋತಿ ಮತ್ತು ಅರ್ಧ ತೋಳಿನ ಕುರ್ತಾ ಧರಿಸಿ, ಆರಾಮ ಕುರ್ಚಿಯಲ್ಲಿ ಸಡಿಲಾಗಿ ಕೂತರು. ಮುವತ್ತೈದರ ವಯಸ್ಸು ಆಯಾಸದ ಅನುಭವವಾಗುವಂಥ ವಯಸ್ಸಾಗಿರಲಿಲ್ಲ. ಆದರೂ ಸಹ ಕೇಶವಲಾಲರಿಗೆ ಕಾರಣವಿಲ್ಲದೆ ಆಯಾಸದ ಅನುಭವವಾಗುತ್ತಿತ್ತು. ಇಂದು ಅವರ ಮನಸ್ಸು ಅಕಸ್ಮಾತ್ ಅತೀತದ ಭಿನ್ನಭಿನ್ನ ಸ್ಮೃತಿಗಳಿಂದ ಆವರಿಸಿತ್ತು. ಸ್ವಲ್ಪವೇ ದೂರದಲ್ಲಿದ್ದ ಜಿ.ಐ.ಪಿ. ರೈಲ್ವೆಯ ಉಪನಗರದ ಹಾರ್ಬರ್ ಲೈನಿನ ಲೋಕಲ್ ರೈಲುಗಳು ಓಡುವ ಸದ್ದು, ದಟ್ಟ ಮತ್ತು ಬಿಸಿ ಗಾಳಿಯನ್ನು ಚೀರುತ್ತಾ ಕೇಶವಲಾಲರ ಡ್ರಾಯಿಂಗ್ ರೂಮಿನೊಳಗೆ ಬರುತ್ತಿತ್ತು.

ಕೇಶವಲಾಲರು ಎದ್ದು ಕಿಡಕಿಯನ್ನು ತೆರೆದರು. ತಿವಟಿಗೆಯ ಮೇಲಿದ್ದ ಬೀಸಣಿಗೆಯನ್ನು ಎತ್ತಿಕೊಂಡು ತಮಗೆ ತಾವೇ ಗಾಳಿಯನ್ನು ಹಾಕಿಕೊಂಡರು. ನಂತರ ಬೆಳಗಿನ ಪತ್ರಿಕೆಯ ಮೇಲೆ ಕಣ್ಣಾಡಿಸಿದರು. ನಂತರ ಆ ಪತ್ರಿಕೆಯನ್ನೂ ಮಡಚಿ, ಅದರಿಂದಲೂ ಗಾಳಿಯನ್ನು ಹಾಕಿಕೊಳ್ಳಲಾರಂಭಿಸಿದರು. ಕಡೆಗೆ ಕಣ್ಣುಗಳನ್ನು ಮುಚ್ಚಿಕೊಂಡು ಏನನ್ನೋ ನೆನಪಿಸಿಕೊಳ್ಳಲು ಪ್ರಯತ್ನಿಸಿದರು.

ಕೋಣೆಯ ಮೂಲೆಯೊಂದರಲ್ಲಿ ಹಾಸಿದ ಮೆತ್ತನೆಯ ಹಾಸಿಗೆ ಮತ್ತು ಗೋಡೆಗೆ ಒರಗಿಸಿಟ್ಟ ಎರಡು ಗೋಳಾಕಾರದ ದಿಂಬು ಒಟ್ಟಿನಲ್ಲಿ ಇದೇ ವರಾಂಡವಾಗಿತ್ತು. ಈ ಹಾಸಿಗೆಯ ಬಳಿಯೇ ಇಡಲ್ಪಟ್ಟಿದ್ದ ಒಂದು ಸಣ್ಣ ಟೇಬಲ್, ಎಲ್ಲಾ ಕೆಲಸಗಳಿಗೂ ಉಪಯೋಗಕ್ಕೆ ಬರುತ್ತಿತ್ತು. ಕೇಶವಲಾಲರು ಈ ಹಾಸಿಗೆಯಲ್ಲಿ ಕೂತು, ಬರೆಯಲು ಈ ಟೇಬಲ್ಲನ್ನು ಉಪಯೋಗಿಸುತ್ತಿದರು. ಇದರ ಮೇಲೆ ಟೆಲಿಫೋನ್ ಸಹ ಇರುತ್ತಿತ್ತು. ಅನೇಕ ಬಾರಿ ಇದರ ಮೇಲೆ ಚಹಾ ಕಪ್‌ಗಳನ್ನೂ ಇಡಲಾಗುತ್ತಿತ್ತು. ಅಲ್ಲದೆ ಇದು ಪುಸ್ತಕಗಳ ರ‍್ಯಾಕ್ ಆಗಿಯೂ ಬದಲಾಗುತ್ತಿತ್ತು. ಇದ್ದಕ್ಕಿದ್ದಂತೆ ಟೆಲಿಫೋನ್ ರಿಂಗಾಯಿತು.

ಕೇಶವಲಾಲರು ಅನಾಸಕ್ತಿಯಿಂದ ಸ್ವಲ್ಪ ಹೊತ್ತು ಟೆಲಿಫೋನನ್ನೇ ನೋಡಿದರು. ಇಂದು ಟೆಲಿಫೋನಿನ ಬಳಿಗೆ ಹೋಗಿ ರಿಸೀವರ್ ಎತ್ತುವುದಕ್ಕೂ ಸೋಮಾರಿತನ ಕಾಡುತ್ತಿತ್ತು. ಹೆಂಡತಿ ಓಡಿ ಅಡುಗೆ ಮನೆಯಿಂದ ಬಂದಳು. ಕೇಶವಲಾಲರು ಕಣ್ಣುಗಳನ್ನು ಮುಚ್ಚಿಕೊಂಡಿದ್ದರು.

'ಹಲೋ...' ಹೆಂಡತಿ ರಿಸೀವರನ್ನು ಕಿವಿಯ ಬಳಿಗೆ ಒಯ್ದಳು.

'ನೀವು ಕೇಶವಲಾಲ್ ಗಾಂಧಿಯವರ ಮನೆಯಿಂದ ಮಾತನಾಡುತ್ತಿದ್ದೀರ?' ಅತ್ತ ಕಡೆಯಿಂದ ಮಹಿಳೆಯೊಬ್ಬಳ ಧ್ವನಿ ಕೇಳಿಸಿತು.

'ಹೌದೌದು....ಇದು ಕೇಶವಲಾಲ್ ಗಾಂಧಿಯವರ ಮನೆಯೇ. ಆದರೆ ನೀವ್ಯಾರು?'

'ಕೇಶವಲಾಲ್ ಗಾಂಧಿಯವರು ಮನೆಯಲ್ಲಿದ್ದಾರೆಯೇ?' ಉತ್ತರಕ್ಕೆ ಬದಲಾಗಿ ಹೊಸ ಪ್ರಶ್ನೆಯೊಂದು ಎದುರಾಯಿತು.

'ಹೂಂ, ಇದ್ದಾರೆ...ಆದರೆ ನೀವ್ಯಾರು? ಎಲ್ಲಿಂದ ಮಾತನಾಡುತ್ತಿದ್ದೀರ?'

'ನೋಡಿ...ನಿಮಗೆ ನಾನು ಗೊತ್ತಿಲ್ಲ. ನನ್ನ ಹೆಸರು ತಿಳಿಯುವುದರಲ್ಲಿ ಅರ್ಥವಿಲ್ಲ. ನೀವು ಸ್ವಲ್ಪ ಕೇಶವಲಾಲರಿಗೆ ಫೋನ್ ಕೊಡಿ.' 'ಆದರೆ ನೀವು ಎಲ್ಲಿಂದ ಮಾತನಾಡುತ್ತಿದ್ದೀರ, ಅದನ್ನಾದರೂ ಹೇಳಿ.'

ಕೇಶವಲಾಲರ ಹೆಂಡತಿಗೆ ವಿಚಿತ್ರವೆನಿಸಿತು. ಫೋನ್‌ನಲ್ಲಿ ಹೀಗೆ ಮಾತಾಡಿ, ತನ್ನ ಗಂಡನನ್ನು ಕರೆಯುವ ಈ ಹೆಂಗಸು ಯಾರು ಎಂದು ಅವಳಿಗೆ ಆಶ್ಚರ್ಯವಾಯಿತು.

'ನಾನು ಫೌರಸ್ ರೋಡಿನಿಂದ ಮಾತನಾಡುತ್ತಿದ್ದೇನೆ.' ಅತ್ತ ಕಡೆಯಿಂದ ನಿರ್ಣಾಯಕ ವಾಕ್ಯವೊಂದು ಕೇಳಿಬಂತು. 'ಬಹುಶಃ ನೀವು ಈ ರಸ್ತೆಯನ್ನು ಸಹ ನೋಡಿರಲಿಕ್ಕಿಲ್ಲ...'

'ಫೌರಸ್ ರೋಡ್?' ಕೇಶವಲಾಲನ ಹೆಂಡತಿ